ಕೂಡಲೇ ಕೊಡಬಹುದು, ಆಮೇಲೆ ನಂತರವೂ ಕೂಡಾ ಕೊಡಬಹುದು. ಅದರಿಂದ ನಾವು ಮಾಹಿತಿ ತರಿಸಿ ಉತ್ತರ ಕೊಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಹೋಗಲಿ, ನಮಗೆ ಉತ್ತರ ಯಾವಾಗ ಕೊಡಿಸುತ್ತೀರಿ ಹೇಳಿ.

ಅಧ್ಯಕ್ಷರು : ಸಾಧ್ಯವಾದರೆ, ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಸಾಧ್ಯವಾದರೆ ಅಂದರೆ, ನಾಳೆಯೇ ಕೊನೆಯ ದಿನ ಅಧ್ಯಕ್ಷರೆ.

ಅಧ್ಯಕ್ಷರು : ಆಯಿತು, ಕೊಡಿಸುತ್ತೇನೆ. ಶ್ರೀಮಾನ್ ಬಣಕಾರ್.

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್, ನಾನಿದ್ದೇನೆ ಸಾರ್.

ಅಧ್ಯಕ್ಷರು : ನಿಮ್ಮ ಸರದಿ ಹೋಗಿ ಆಯಿತು. ಬಣಕಾರ್‌ರವರೇ ಸಂಕ್ಷಿಪ್ತವಾಗಿ ಹೇಳಿ.

2. ವಿಷಯ :– ಹಿರೇಕೆರೂರಿನಲ್ಲಿ ಕಳೆದ 15 ದಿವಸಗಳಿಂದ ಡೆಂಗ್ಯೂ ಜ್ವರ ವ್ಯಾಪಕವಾಗಿ ಹಬ್ಬಿರುವ ಬಗ್ಗೆ.

ಶ್ರೀ ಯು.ಬಿ.ಬಣಕಾರ್ : ಸನ್ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಹಿರೇಕೆರೂರು ತಾಲ್ಲೂಕಿನಲ್ಲಿ ಕಳೆದ 15 ದಿವಸಗಳಿಂದ ಡೆಂಗ್ಯೂ ಜ್ವರ ವ್ಯಾಪಕವಾಗಿ ಹಬ್ಬಿದೆ. ಆರೋಗ್ಯ ಸಚಿವರು ಇಲ್ಲಿಯವರೆಗೂ ಇಲ್ಲೇ ಇದ್ದರು, ಈಗ ಎದ್ದು ಹೋದರು. ಇದರ ಪರಿಣಾಮವಾಗಿ 4 ಜನ ಮೃತ ಪಟ್ಟಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮಾನವೀಯ ಕಾಳಜಿಯನ್ನು ತೋರಿಸಿ ಮೈಸೂರಿನಲ್ಲಿ ಡೆಂಗ್ಯೂ ಜ್ವರಕ್ಕೆ ಬಲಿಯಾದವರಿಗೆ 1 ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟಿದ್ದಾರೆ. ಅದು ರಾಜ್ಯ ವ್ಯಾಪಿ ಕೊಡಬೇಕು ಹಾಗೂ ಚಿಕಿತ್ಸೆಗೆ ಬಡವರಿಗೆ ಹಣ ಇಲ್ಲ. ಆ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯವರ ಜೊತೆ ಮಾತನಾಡಿ..

ಅಧ್ಯಕ್ಷರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಬಂದೇ ಬಿಟ್ಟರು. ಉತ್ತರ ಹೇಳುತ್ತೀರಾ, ಹೇಳಿ.

ಶ್ರೀ ಯು.ಬಿ.ಬಣಕಾರ್ : ಡೆಂಗ್ಯೂ ಜ್ವರದ ಬಗ್ಗೆ, ಆಗಲೇ ಸಚಿವರು ಇರಲಿಲ್ಲ. ಅದಕ್ಕಾಗಿ ಮತ್ತೊಮ್ಮೆ ಹೇಳುತ್ತಿದ್ದೇನೆ. ಸತ್ತವರಿಗೆ ಪರಿಹಾರ ಕೊಡಬೇಕು ಹಾಗೂ ಚಿಕತ್ಸಾ ವೆಚ್ಚವನ್ನು ಭರಿಸುವಂಥ ವ್ಯವಸ್ಥೆ ಆಗಬೇಕು.

ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಉತ್ತರ ಒದಗಿಸಲಾಗಿದೆ.

ಅಧ್ಯಕ್ಷರು : ಏನಾದರೂ ಇದ್ದರೆ ಹೇಳಿ ಬಿಡಿ.

ಶ್ರೀ ಯು.ಟಿ.ಖಾದರ್ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ವೃಂದ 1946 ವೈದ್ಯರ ಹುದ್ದೆಗಳು....

ಶ್ರೀ ಹೆಚ್.ಪಿ.ಬಾಲಕೃಷ್ಣ : ಅವರಿಗೆ ಉತ್ತರ ಕೊಡುತ್ತಿದ್ದಾರೆ. ನಮಗೆ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು : ಉತ್ತರ ರೆಡಿ ಇದ್ದರೆ ಕೊಡಬಹುದು. ತಯಾರಾಗಿದ್ದರೆ ಕೊಟ್ಟು ಬಿಡಬಹುದು.

ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಹಾವೇರಿ ಜಿಲ್ಲೆ ಹಿರೆಕೆರೂರು ತಾಲ್ಲೂಕಿನಲ್ಲಿ 2013ನೇ ಸಾಲಿನಲ್ಲಿ ಇದುವರೆಗೆ 1386 ವಿವಿಧ ಜ್ವರ ಪ್ರಕರಣಗಳು ವರದಿಯಾಗಿದ್ದು, ಇವುಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ 43 ಹಾಗೂ ಸರ್ಕಾರಿ ಆಸ್ಪತ್ರೆ 25 ಶಂಕಿತ ಡೆಂಗಿ ಜ್ವರ ಪ್ರಕರಣಗಳು (ಒಟ್ಟು 68 ಪ್ರಕರಣಗಳು) ದಾಖಲಾಗಿದ್ದು. ಇವುಗಳ ರಕ್ತದ ಮಾದರಿಗಳನ್ನು ಪರೀಕ್ಷಿಸಲಾಗಿ ಖಾಸಗಿ ಆಸ್ಪತ್ರೆಗಳಲ್ಲಿ 15 ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ 7 ಪ್ರಕರಣಗಳು ಡೆಂಗಿ ಜ್ವರವೆಂದು (ಒಟ್ಟು 22 ಪ್ರಕರಣಗಳು) ಖಚಿತ ಪಟ್ಟಿರುತ್ತವೆ.

ಕಳೆದ 15 ದಿನಗಳಿಂದ ಹಿರೆಕೆರೂರು ತಾಲ್ಲೂಕಿನ 35 ಜನರು ಶಂಕಿತ ಡೆಂಗ್ಯೂ ಜ್ವರದಿಂದ ಬಳಲುತ್ತಿದ್ದು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ ಹಿರೆಕೆರೂರು ತಾಲ್ಲೂಕಿನಲ್ಲಿ ಖಚಿತ ಡೆಂಗಿ ಜ್ವರದಿಂದ ಮೃತಪಟ್ಟ ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ.

ಜನವರಿ 2013ರಿಂದ ಇಲ್ಲಿಯವರೆಗಿನ ಹಾವೇರಿ ಜಿಲ್ಲೆಯ ತಾಲ್ಲೂಕುವಾರು ವಿವರ ಹೀಗಿದೆ:

ತಾಲ್ಲೂಕು	ಶಂಕಿತ ಡೆಂಗಿ ಜ್ವರ ಪ್ರಕರಣಗಳು		ಖಚಿತ ಡೆಂಗಿ ಜ್ವರ ಪ್ರಕರಣಗಳು	
	ಖಾಸಗಿ ಆಸ್ಪತ್ರೆ	ಸರ್ಕಾರಿ ಆಸ್ಪತ್ರೆ	ಖಾಸಗಿ ಆಸ್ಪತ್ರೆ	ಸರ್ಕಾರಿ ಆಸ್ಪತ್ರೆ
ಹಾವೇರಿ	60	32	2	4
ಹಿರೇಕೆರೂರು	43	25	15	7
ಸವಣೂರು	16	5	1	3
ಶಿಗ್ಗಾಂವ	26	16	0	3
ಬ್ಯಾಡಗಿ	15	7	7	2
ರಾಣಿಬೆನ್ನೂರು	61	2	25	1
ಹಾನಗಲ್	24	11	1	3
ಒಟ್ಟು	245	98	51	23
ಒಟ್ಟು	343		74	

ಮೇಲ್ಕಂಡ ಪ್ರಕರಣಗಳಲ್ಲಿ 141 ಪ್ರಕರಣಗಳು ಖಾಸಗಿ ಆಸ್ಪತ್ರೆಗಳಲ್ಲಿ ಮತ್ತು 56 ಪ್ರಕರಣಗಳು ಸರ್ಕಾರಿ ಆಸ್ಪತ್ರೆಗಳಲ್ಲಿ (ಒಟ್ಟು 197 ಪ್ರಕರಣಗಳು) ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದ ಎಲ್ಲಾ ಪ್ರಕರಣಗಳು ಗುಣಮುಖವಾಗಿವೆ.

ಸರ್ಕಾರಿ ಆಸ್ಪತ್ರೆಗಳಲ್ಲಿನ ಎಲ್ಲಾ ಪ್ರಕರಣಗಳಿಗೂ ಉಚಿತ ಚಿಕಿತ್ಸೆ ಮತ್ತು ನಿರ್ವಹಣೆ ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿ ಒಟ್ಟು 91 ಗ್ರಾಮಗಳನ್ನು ಸಮಸ್ಯಾತ್ಮಕವೆಂದು ಗುರುತಿಸಲಾಗಿದ್ದು. ಈ ಗ್ರಾಮಗಳಲ್ಲಿ ಜ್ವರ ಸಮೀಕ್ಷೆ ಮತ್ತು ಈಡೀಸ್ ರೋಗವಾಹಕ ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನಾ ಕಾರ್ಯವನ್ನು ಚುರುಕುಗೊಳಿಸಲಾಗಿದೆ.

ಡೆಂಗಿ ಜ್ವರ ರೋಗಕ್ಕೆ ಯಾವುದೇ ನಿಖರವಾದ ಔಷಧಿ ಇರುವುದಿಲ್ಲ. ಆದರೂ ಸಹ ರೋಗ ಲಕ್ಷಣಗಳಿಗೆ ಅನುಗುಣವಾಗಿ ರೋಗಿಯ ಚಿಕಿತ್ಸೆ ಮತ್ತು ನಿರ್ವಹಣೆಗೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಬೇಕಾದ ಜೀವ ರಕ್ಷಕ ಔಷಧಿಗಳ ಸಾಕಷ್ಟು ದಾಸ್ತಾನು ಹಾವೇರಿ

ಮಾತ್ರವಲ್ಲದೆ, ಎಲ್ಲಾ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲೂ ಲಭ್ಯವಿರುವಂತೆ ಕ್ರಮ ಕೈಗೊಳ್ಳಲಾಗಿದೆ.

ಇಲಾಖೆಯವತಿಯಿಂದ ಮೈಸೂರು ಜಿಲ್ಲೆಯಲ್ಲಿ ಡೆಂಗಿ ಜ್ವರ ಪೀಡಿತರ ಚಿಕಿತ್ಸೆಗೆ ಯಾವುದೇ ಪರಿಹಾರ ನೀಡಿರುವುದಿಲ್ಲ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಡೆಂಗಿ ಜ್ವರ ಪೀಡಿತರಿಗೆ ಕನಿಷ್ಟ 5 ಹಾಸಿಗೆಗಳನ್ನು ಕಾಯ್ದಿರಿಸಲಾಗಿದ್ದು. ಸಂಪೂರ್ಣ ಚಿಕಿತ್ಸೆಯನ್ನು ಉಚಿತವಾಗಿ ನೀಡುತ್ತಿರುವುದರಿಂದ ಪ್ರತ್ಯೇಕ ಪರಿಹಾರ ನೀಡುವ ವ್ಯವಸ್ಥೆ ಇರುವುದಿಲ್ಲ.

ಮಳೆಗಾಲದ ಮುನ್ನ ಮನೆಗಳ ಒಳಾಂಗಣ ನೀರು ಶೇಖರಣೆಗಳಲ್ಲಿ ಹಾಗೂ ಮಳೆಗಾಲದಲ್ಲಿ ಮನೆಗಳ ಸುತ್ತ ಮುತ್ತಲೂ ಬಿಸಾಡಿದ ಘನ ತ್ಯಾಜ್ಯ ವಸ್ತುಗಳಲ್ಲಿನ ನೀರು ಶೇಖರಣೆಗಳಲ್ಲಿ ಈಡೀಸ್ ಎಂಬ ಜಾತಿಯ ರೋಗವಾಹಕ ಸೊಳ್ಳೆಗಳು ಹೆಚ್ಚಾಗಿ ಉತ್ಪತ್ತಿಯಾಗುವುದರಿಂದ ಈ ಋತುಮಾನದಲ್ಲಿ ಡೆಂಗಿ ಜ್ವರ ಹೆಚ್ಚಾಗಲು ಕಾರಣವಾಗಿರುತ್ತದೆ.

ಇದರ ನಿಯಂತ್ರಣಕ್ಕೆ ಸರ್ಕಾರವು ಸಮರೋಪಾದಿಯಲ್ಲಿ ಕಾರ್ಯೋನ್ಮುಖವಾಗಿದ್ದು. ಸಮಸ್ಯಾತ್ಮಕ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಈಡೀಸ್ ಸೊಳ್ಳೆ ಉತ್ಪತ್ತಿ ತಾಣಗಳ ಸಮೀಕ್ಷೆ ಮತ್ತು ನಿರ್ಮೂಲನಾ ಕಾರ್ಯವನ್ನು ಕೈಗೊಳ್ಳಲಾಗಿದೆ. ದಿನಾಂಕ: 29–5–2013ರಂದು ನನ್ನ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಭೆಯನ್ನು ನಡೆಸಿ. ತುರ್ತಾಗಿ ಕೈಗೊಳ್ಳಬೇಕಾದ ಮುಂಜಾಗೃತಾ ಮತ್ತು ನಿಯಂತ್ರಣ ಚಟುವಟಿಕೆಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಆದೇಶವನ್ನು ನೀಡಲಾಗಿದೆ.

ಅಧ್ಯಕ್ಷರು : ಅದರಲ್ಲಿ ಹೆಜ್ಜೇನೂ ಇಲ್ಲ. ಅವರು ಕೇಳಿರುವುದು ಪರಿಹಾರ ಅಷ್ಟೇ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಯಾರಾದರೂ ಒಬ್ಬರು ತೀರಿ ಹೋದರೆ ಅದು ಡೆಂಗ್ಯೂ ಜ್ವರದಿಂದಲೇ ತೀರಿ ಹೋಗಿದ್ದಾರೆನ್ನುವುದು, ಬಹುಶಃ ಅಲ್ಲಿ Mac elisa test ಮತ್ತು Dengue Death Audit Committee ಎಂದು DHO ನೇತೃತ್ವದಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿ ಇದೆ. ಅವರು ಅಲ್ಲಿಂದ certify ಮಾಡಿ ಇಲ್ಲಿಗೆ ಕಳುಹಿಸಿದಾಗ ಮಾತ್ರ ಸರ್ಕಾರ ಅವರು ಡೆಂಗ್ಯೂ ಜ್ವರದಿಂದಲೇ ತೀರಿಹೋಗಿದ್ದಾರೆಂದು ನಮಗೆ

ಹೇಳುವುದಕ್ಕೆ ಆಗುತ್ತದೆ. ಆದಕಾರಣ, ಸರ್ಕಾರದ ಮಟ್ಟದಲ್ಲಿ ಈ ಒಂದು report ಬರದ ಕಾರಣ, ಖಚಿತವಾಗಿ ಡೆಂಗ್ಯೂ ಜ್ವರದಿಂದ ಮೃತಪಟ್ಟ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. ಬಹುಶಃ ಇವತ್ತು ಬೇರೆ ಬೇರೆ 141 ಪ್ರಕರಣಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಮತ್ತು 56 ಪ್ರಕರಣಗಳು ಸರ್ಕಾರಿ ಆಸ್ಪತ್ರೆಗಳಲ್ಲಿ (ಒಟ್ಟು 197 ಪ್ರಕರಣಗಳು) ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದ ಎಲ್ಲಾ ಪ್ರಕರಣಗಳು ಗುಣಮುಖವಾಗಿವೆ.

ಬಹುಶಃ ಹಾವೇರಿ ಜಿಲ್ಲೆಯಲ್ಲಿದ್ದಂತಹ ಯಾವ ಪ್ರಶ್ನೆ ಎತ್ತಿದ್ದೀರಿ. ಇದರ ಬಗ್ಗೆ ಮತ್ತೇನಾದರೂ ವಿವರ, ನಿಮ್ಮ ಅನಿಸಿಕೆ ಇದ್ದಲ್ಲಿ ಇದಕ್ಕೆ ಸಂಬಂಧಪಟ್ಟ ನಮ್ಮ ಇಲಾಖಾಧಿಕಾರಿಗಳೊಡನೆ ಚರ್ಚೆ ಮಾಡಿ ಸಂಪೂರ್ಣವಾಗಿ ಸಮರೋಪಾದಿಯಲ್ಲಿ warfooting ನಲ್ಲಿ ಅದನ್ನು ಬಗೆ ಹರಿಸುವ ಪ್ರಯತ್ನ ಮಾಡುತ್ತೇವೆ.

3) **ವಿಷಯ** : ಬಾಗೇಪಲ್ಲಿ ಮತ್ತು ಗುಡಿಬಂಡೆ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವುದು.

ಶ್ರೀ ಎಸ್.ಎನ್.ಸುಬ್ಬಾರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, ಗುಡಿಬಂಡೆ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 96 ವೈದ್ಯ ಸಿಬ್ಬಂದಿ ಇರಬೇಕಾಗಿದ್ದು, ಈ ಪೈಕಿ 21 ವೈದ್ಯ ಸಿಬ್ಬಂದಿ ಮಾತ್ರ ಇದ್ದಾರೆ. ಅದೇ ರೀತಿ 101 ವೈದ್ಯರ ಪೈಕಿ ಇಬ್ಬರು ಮಾತ್ರ ಇದ್ದಾರೆ. ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆ ಪರಿಸ್ಥಿತಿಯೂ ಇದೇ ರೀತಿಯಲ್ಲಿದೆ. ಅಲ್ಲಿ 11 ವೈದ್ಯರಿದ್ದಾರೆ. ಆ ಆಸ್ಪತ್ರೆಯಲ್ಲಿ ಅವ್ಯವಸ್ಥೆ ಹೇಗಿದೆಯೆಂದರೆ, ಅದೊಂದು ರೀತಿ ಟ್ರಾವೆಲ್ ಏಜೆನ್ಸಿ ತರಹ ಇದೆ! ಆ ಆಸ್ಪತ್ರೆಗೆ ಯಾವುದೇ ರೋಗಿ ಹೋದರೂ ಬೆಂಗಳೂರಿನಲ್ಲಿರುವ ಆಸ್ಪತ್ರೆಗೆ ಹೋಗಬೇಕೆಂದು ಸುಲಭವಾಗಿ ಚೀಟಿ ಕೊಟ್ಟು ಕಳುಹಿಸುತ್ತಿದ್ದಾರೆ. ಆದುದರಿಂದ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಇದರತ್ತ ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ 5946 ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಸುಮಾರು 4024 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದು, 1697 ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಸಾಮಾನ್ಯ ವೈದ್ಯಾಧಿಕಾರಿಗಳು ಅಂದರೆ,